ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಹೆಚ್ಚುವರಿ ಜೆಎಂಎಫ್ ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆ: 194/2023

ಪಿ ಡಬ್ಲ್ಯೂ: 3
ಸಿ ಡಬ್ಲ್ಯೂ: 5

| | | |
|---|---|---|
| ಸಾಕ್ಷಿಯ ಹೆಸರು | : | ದಾದಪಿರ್ |
| ತಂದೆಯ ಹೆಸರು | : | ಚಮನ್ ಸಾಬ್ ಹರಿಹರ |
| ವಯಸ್ಸು | : | 60 |
| ಉದ್ಯೋಗ | : | ನಿವೃತ್ತ ಅಬಕಾರಿ ಉಪನಿರೀಕ್ಷಕರು |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕ: 27-10-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು ದಿನಾಂಕ 28-07-2022 ರಿಂದ 06-07-2024 ರ ವರೆಗೆ ಅಬಕಾರಿ ಉಪನಿರೀಕ್ಷಕರಾಗಿ ಅಬಕಾರಿ ಉಪ ಅಧೀಕ್ಷಕರ ಕಚೇರಿ ರಾಣೇಬೆನ್ನೂರಿನಲ್ಲಿ ಕೆಲಸ ನಿರ್ವಹಿಸಿರುತ್ತೇನೆ.

2. ದಿನಾಂಕ 02-05-2023 ರಂದು ಪ್ರಕರಣದ ಕಡತ ಹಾಗೂ ರಾಸಾಯನಿಕ ಪರೀಕ್ಷೆಗಾಗಿ ತೆಗೆದ ಮಾದರಿ ಮದ್ಯವನ್ನು ಚಾ ಸಾ 1 ರವರಿಂದ ಸ್ವೀಕರಿಸಿಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿನಾಂಕ 17-05-2023 ರಂದು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಳನ್ನು ಚಾ ಸಾ 3 ವರವರ ಮೂಲಕ ಧಾರವಾಡದ ಪ್ರಯೋಗಾಗಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 02-06-2023 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿದ ಬಗ್ಗೆ ಮನವಿ ಹಾಗೂ ವರದಿಯನ್ನು ನೋಡುತ್ತಿದ್ದು ಅವುಗಳನ್ನು ನಿಪಿ 5 ಮತ್ತು ನಿಪಿ 6 ಎಂದು, ಅದರಲ್ಲಿರುವ ಸಹಿಗಳನ್ನು ನಿಪಿ 5 ಎ ಮತ್ತು ನಿಪಿ 6 ಎ ಎಂದು ಗುರುತಿಸಲಾಯಿತು. ಅದೇ ದಿನ ಚಾ ಸಾ 3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಪಿ ಡಬ್ಲ್ಯೂಃ 3

3. ದಿನಾಂಕ 14-07-2023 ರಂದು ಆರೋಪಿಯ ಪತ್ತೆಗಾಗಿ ಚಾ ಸಾ 3 ರವರಿಗೆ ಆದೇಶಿಸಿರುತ್ತೇನೆ. ದಿನಾಂಕ 17-07-2023 ರಂದು ಚಾ ಸಾ 3 ರವರು ಆರೋಪಿಯ ಪತ್ತೆ ಮಾಡಲು ಹೋಗಿ ಬಂದ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ಕಚೇರಿ ಆದೇಶ ಮತ್ತು ಚಾ ಸಾ 3 ರವರು ನೀಡಿದ ಮಾಹಿತಿಯನ್ನು ನಿಪಿ 7 ಮತ್ತು ನಿಪಿ 8 ಎಂದು ಗುರುತಿಸಲಾಯಿತು. ದಿನಾಂಕ 27-07-2023 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷಿ ಪುರಾವೆಗಳು ಇದ್ದುದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನನ್ನ ಕೆಳ ಅಧಿಕಾರಿಗಳು ತಯಾರು ಮಾಡಿದ ವರದಿಗೆ ನಾನು ಸಹಿ ಮಾಡಿರುತ್ತೇನೆ, ಯಾವುದೇ ತನಿಖೆ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗಾಗಿ ಎಷ್ಟು ಮದ್ಯವನ್ನು ಕಳುಹಿಸಿರುತ್ತೀರಿ ಮತ್ತು ಎಷ್ಟು ಮದ್ಯ ಉಳಿದಿರುತ್ತದೆ ಎಂದರೆ ಸಿಕ್ಕಿದ ಎಲ್ಲಾ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೇವೆ. ಪ್ರಕರಣದ ಬಗ್ಗೆ ಯಾವುದೇ ತನಿಖೆ ನಡೆಸದೇ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೀರ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗೋಸ್ಕರ ಆರೋಪಿಯ ವಿರುದ್ಧ ಸರಿಯಾದ ತನಿಖೆ ನಡೆಸದೇ ಆರೋಪಿಯ ವಿರುದ್ಧ ಯಾವುದೇ ಆರೋಪ ಧೃಢಪಡದಿದ್ದರೂ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಮತ್ತು ದೋಷಾರೋಪಣಾ ಪಟ್ಟಿಯನ್ನು ಅನುಕೂಲಕ್ಕೆ ತಕ್ಕಂತೆ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. C/c. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.